# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1652 |
| 2 | ಸದಸ್ಯರ ಹೆಸರು | ಶ್ರೀ ಸಿ.ಎನ್ ಮಂಜೇಗೌಡ |
| 3 | ಉತ್ತರಿಸುವ ಸಚಿವರು | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |
| 4 | ಉತ್ತರಿಸಬೇಕಾದ ದಿನಾಂಕ | 18-03-2026 |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ (KSIC) ಮೈಸೂರಿನ ಟಿ.ನರಸೀಪುರದಲ್ಲಿರುವ ಘಟಕವನ್ನು ಮುಚ್ಚಲು ಮತ್ತು ಆ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸಲು 'ಸರ್ಕಾರ ಉದ್ದೇಶಿಸಿರುವುದು ನಿಜವೇ; | ರಾಜ್ಯದ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ (KSIC) ಮೈಸೂರಿನ ಟಿ.ನರಸೀಪುರದಲ್ಲಿರುವ ಘಟಕವನ್ನು ಮುಚ್ಚಲು ಸರ್ಕಾರವು ಉದ್ದೇಶಿಸಿರುವುದಿಲ್ಲ. |
| ಆ) | ಒಂದು ವೇಳೆ ಹೌದಾದಲ್ಲಿ, ಲಾಭದಾಯಕವಾಗಿ ನಡೆಯುತ್ತಿರುವ/ನಡೆಯಬಹುದಾದ ರೇಷ್ಮೆ ಘಟಕವನ್ನು ಮುಚ್ಚುವ ಅನಿವಾರ್ಯತೆ ಏನಿದೆ; ಈ ಬಗ್ಗೆ ಸರ್ಕಾರ ನಡೆಸಿದ ಅಧ್ಯಯನದ ವರದಿ ಏನು; | ಘಟಕವನ್ನು ಮುಚ್ಚುವ ಅನಿವಾರ್ಯತೆ ಮತ್ತು ಮುಚ್ಚುವ ಉದ್ದೇಶವಿರುವುದಿಲ್ಲ. |
| ಇ) | ಈ ರೇಷ್ಮೆ ಘಟಕವನ್ನು ನಂಬಿಕೊಂಡಿರುವ ನೂರಾರು ನೇಕಾರರು, ಕಾರ್ಮಿಕರು ಮತ್ತು ಸ್ಥಳೀಯ ರೇಷ್ಮೆ ಬೆಳೆಗಾರರ ಬದುಕಿಗೆ ಈ ನಿರ್ಧಾರದಿಂದ ಆಗುವ ಪೆಟ್ಟನ್ನು ಸರ್ಕಾರ ಗಮನಿಸಿದೆಯೇ; ಅವರ ಬದುಕಿಗೆ ಪರ್ಯಾಯ ಮಾರ್ಗಗಳೇನು; | ಆದ್ದರಿಂದ ಈ ರೇಷ್ಮೆ ಘಟಕವನ್ನು ನಂಬಿಕೊಂಡಿರುವ ನೂರಾರು ನೇಕಾರರು, ಕಾರ್ಮಿಕರು ಮತ್ತು ಸ್ಥಳೀಯ ರೇಷ್ಮೆ ಬೆಳೆಗಾರರ ಬದುಕಿಗೆ ಯಾವುದೇ ತೊಂದರೆ/ಪೆಟ್ಟು ಆಗುವುದಿಲ್ಲ. |
| ಈ) | ಕ್ರೀಡಾಂಗಣಕ್ಕೆ ಬೇರೆ ಪರ್ಯಾಯ ಸರ್ಕಾರಿ ಭೂಮಿ ಲಭ್ಯವಿದ್ದರೂ ಸಹ, ಐತಿಹಾಸಿಕ ರೇಷ್ಮೆ ಉದ್ದಿಮೆಯ ಅಸ್ತಿತ್ವವನ್ನು ಅಳಿಸಿ ಕ್ರೀಡಾಂಗಣ ನಿರ್ಮಿಸುವುದು ಎಷ್ಟು ಸಮಂಜಸ; ಈ ನಿರ್ಧಾರವನ್ನು ಕೈಬಿಡುವ ಉದ್ದೇಶ ಸರ್ಕಾರಕ್ಕಿದೆಯೇ; | ಕ್ರೀಡಾಂಗಣಕ್ಕೆ ಬೇರೆ ಪರ್ಯಾಯ ವ್ಯವಸ್ಥೆಯನ್ನು ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ರಾಜ್ಯದ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ (KSIC) ಮೈಸೂರಿನ ಟಿ.ನರಸೀಪುರದಲ್ಲಿರುವ ಜಮೀನನ್ನು ಕ್ರೀಡಾಂಗಣ ನಿರ್ಮಾಣಕ್ಕಾಗಿ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ನೀಡಿರುವುದನ್ನು ಕೈಬಿಡಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಉ) | ಮೈಸೂರಿನ ರೇಷ್ಮೆ ಸೀರೆಗಳಿಗೆ ಬಹಳ ಬೇಡಿಕೆ ಇರುವುದರಿಂದ ಇನ್ನೂ 5-6 ಘಟಕಗಳನ್ನು ಕನಕಪುರ. ರಾಮನಗರ, ಮಂಡ್ಯ ಹಾಗೂ ದೊಡ್ಡಬಳ್ಳಾಪುರದಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೇ? | ಮೈಸೂರಿನ ರೇಷ್ಮೆ ಸೀರೆಗಳಿಗೆ ಬಹಳ ಬೇಡಿಕೆ ಇರುವುದರಿಂದ ಈಗಾಗಲೇ ರೇಷ್ಮೆ ನೇಯ್ಗೆ ಕಾರ್ಖಾನೆಯಲ್ಲಿ ಘಟಕ 2 ಮತ್ತು ರೇಷ್ಮೆ ನೇಯ್ಗೆ ಘಟಕ ಚನ್ನಪಟ್ಟಣದಲ್ಲಿ ಸಹ ಮೈಸೂರು ಸಿಲ್ಕ್ ಸೀರೆಗಳನ್ನು ಉತ್ಪಾದಿಸಿಸುತ್ತಿದೆ. ಆದರೆ, ಕನಕಪುರ, ರಾಮನಗರ, ಮಂಡ್ಯ ಹಾಗೂ ದೊಡ್ಡಬಳ್ಳಾಪುರದಲ್ಲಿ ಘಟಕಗಳನ್ನು ಸ್ಥಾಪಿಸಲು ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

**ಕಡತ ಸಂಖ್ಯೆ: ರೇಷ್ಮೆ 87 ರೇಇವಿ 2026**

**(ಕೆ.ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**